# ನವಿಲುಗನ್ನಡಿ

- ಪರಂಜ್ಯೋತಿ ಅವರ ಕುರಿತು ರಹಮತ್ ತರೀಕೆರೆ ಅವರ ಬರಹ ಆಪ್ಯಾಯಮಾನವಾಗಿತ್ತು. ಜ.ನಾ. ತೇಜಶ್ರೀ ಅವರು ಕೆ. ಸಚ್ಚಿದಾನಂದನ್ ಅವರೊಡನೆ ನಡೆಸಿದ ಸಂದರ್ಶನ 'ಕಾವ್ಯ ಮನುಕುಲದ ತಾಯಿ ನುಡಿ' ಅತ್ಯುತ್ತಮವಾಗಿತ್ತು. ಕಲ್ಪನೆ ಕಾವ್ಯ, ಕವನಗಳು ಉತ್ತಮವಾಗಿ ಮೂಡಿಬಂದಿವೆ. ಒಟ್ಟಾರೆ ಜುಲೈ ಸಂಚಿಕೆ ಹೂರಣಭರಿತವಾಗಿ ಮೂಡಿಬಂದಿದೆ.

**ಬಿ.ಆರ್.ಅಣ್ಣಾಸಾಗರ, ಸೇಡಂ**

- ನನಗೆ ಸುಂದರ ಕವಿತೆಗಳ ನೆನಪಾಗುವಾಗಲೆಲ್ಲ ಎಕ್ಕುಂಡಿ ಅವರ 'ಎಂದಾದರೊಂದು ದಿನ ನಾನೂ ಮಿಥಿಲೆಗೆ ಹೋಗಿ...' ಎಂಬ ಕವನ ಕಾಡುತ್ತದೆ. ಈ ತಿಂಗಳ ಮಯೂರದಲ್ಲಿ 'ಒಂದು ಪ್ರಾರ್ಥನೆ' ಕವಿತೆಯಲ್ಲಿ ನಮ್ಮನ್ನೆಲ್ಲ ಮಿಥಿಲೆಗೆ ಕರೆದೊಯ್ದು, ಬೀದಿ ಬೀದಿಯನಲೆದು, ಮರದ ನೆರಳಲ್ಲಿ ಕುಳಿತು, ರಾಮಚಂದ್ರನ ಹಾಡು ಹಾಡಿ, ಸೀತಾ ಕಲ್ಯಾಣ ನೋಡಿ, ಎಕ್ಕುಂಡಿಯವರ ನೆನಪಲ್ಲಿ ಮಿಥಿಲೆಯ ಯಾತ್ರೆ ಮಾಡಿಸಿದ ಎಚ್.ಎಸ್. ವೆಂಕಟೇಶಮೂರ್ತಿ ಅವರ ಕವಿತೆ ಅರ್ಥಪೂರ್ಣ.

**ಎಂ.ಗೀತಾ,ಶಿವಮೊಗ್ಗ**

- ಪ್ರೊ.ಎಚ್.ಟಿ. ಪೋತೆ ಅವರ 'ಬೆಳಕು ಬೇಗುದಿ' ಕಥೆಯಲ್ಲಿ ಧರ್ಮಗಳ ಕಟ್ಟುಪಾಡುಗಳನ್ನು ಮೀರಿ, ಮನುಷ್ಯತ್ವ ಉಸಿರಾಡುವ ಪ್ರಕಾಶನಂತಹ ಆದರ್ಶ ವ್ಯಕ್ತಿಯ ಚಿತ್ರಣವನ್ನು ಮನಸ್ಸಿಗೆ ತಾಕುವಂತೆ ಕಟ್ಟಿ ಕೊಡಲಾಗಿದೆ. ಮನದ ಮರ (ಸಿದ್ದು ಸತ್ಯಣ್ಣವರ) ಮತ್ತು ಪಾನ್‌ಶಾಪ್ ಹುಡುಗನ ಪ್ರೇಮ್ ಕಹಾನಿ (ರಾಜಕುಮಾರ ಕುಲಕರ್ಣಿ) ಕಥೆಗಳು ನೆನಪಲ್ಲಿ ಉಳಿಯುತ್ತವೆ.

**ಅನಿಲ್ ಗುನ್ನಾಪೂರ, ಬಾಗಲಕೋಟೆ**

- ಓ.ಎಲ್.ಎನ್. ಅವರ 'ಮರಣ ವೈಭವ' ಪ್ರಬಂಧ ಮತ್ತು ಜ.ನಾ.ತೇಜಶ್ರೀ ಅವರು ಮಾಡಿದ ಕೆ.ಸಚ್ಚಿದಾನಂದನ್ ಅವರ ಸಂದರ್ಶನ ಆಪ್ತವಾಗಿ ಬಂದಿದೆ. ಆರಿಫ್ ರಾಜಾ ಅವರ ಕಾವ್ಯಸಂಕ ಚೆನ್ನಾಗಿದೆ.

**ಕಾವ್ಯಾ ಎಸ್.ಎಚ್., ಧಾರವಾಡ**

- ಪೂರ್ಣಿಮಾಭಟ್ಟ ಸಣ್ಣಕೇರಿ ಅವರ ಕಥೆ




'ಮಾಯ್ಕಾರ ಕಿಟಕಿ' ಹಳ್ಳಿ ಮತ್ತು ನಗರ ಪ್ರದೇಶಗಳ ಚಿತ್ರಣವನ್ನು ಒಟ್ಟೊಟ್ಟಿಗೇ ಕೊಟ್ಟಂತಿದೆ. ಸಾಮಾನ್ಯವಾಗಿ ಹಳ್ಳಿಗಳ ಮನೆಗಳಲ್ಲಿ ಕಣ್ಣಿಗೆ ಕಾಣುವ ಕೋಳಕಂಬ, ಆ ಕಂಬದ ಸುತ್ತ ಸುತ್ತುವ ಬಾಸಿಂಗ, ಹಳೆ ಟ್ರಂಕು, ಹೊಗೆ ಹಿಡಿದ ಬೆತ್ತದ ಪೆಟ್ಟಿಗೆ, ಹಿತ್ತಾಳೆ ಪಾತ್ರೆ ಹಳೆಯ ನೆನಪುಗಳನ್ನು ಕೆದಕಿದವು.

**ಶಂಕರನಾರಾಯಣ ಭಟ್, ಮಾಡಗೇರಿ**

- ಪ್ರೊ. ಎಚ್.ಟಿ. ಪೋತೆ ಅವರ 'ಬೆಳಕು ಬೇಗುದಿ' ಕಥೆ ಸರಳ ಸುಂದರವಾಗಿದೆ. ಅಂಬೇಡ್ಕರ್ ಅವರ ವಿಚಾರಗಳನ್ನು ಸೂಕ್ಷ್ಮವಾಗಿ ಪ್ರತಿಪಾದಿಸಿದ್ದಾರೆ. ಎಲ್ಲಿಯೂ ನಿಲ್ಲದಂತೆ ಓದಿಸಿಕೊಂಡು ಹೋಗುತ್ತದೆ. ಮಿರ್ಜಾ ಬಷೀರ್ ಅವರ ಕಥೆ 'ಕಿಂದರಿ ಜೋಗಿ' ಮನಸ್ಸನ್ನು ಹಿಡಿದಿಟ್ಟುಕೊಂಡಿತು.

**ಪ್ರೀತಿ ಬಿರಾದಾರ, ವಿಜಯಪುರ**

- 'ಹೊತ್ತುರಿಯುತಿದೆ ಗುರ್ಲಿಂಗನ ಅನುಭವ ಮಂಟಪವು' ಕಥೆಯು (ಸರ್ಜಾಶಂಕರ ಹರಳಿಮಠ) ಇಂದಿನ ಸಾಂಸ್ಕೃತಿಕ ಸಂಸ್ಥೆಗಳ ದುರಂತ ಸ್ಥಿತಿಯನ್ನು ತುಂಬಾ ಚೆನ್ನಾಗಿ ಚಿತ್ರಿಸಿದೆ.

**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**